**ಓ ಎಸ್ ನಂಃ 301/2017**

**ಪಿ. ಡಬ್ಲ್ಯೂ ಃ 1**

**ದಿಃ 23.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ 6ನೇ ಪ್ರತಿವಾದಿ ಪರ ಶ್ರೀ ಎಸ್ ಜಿ ಆರ್ ವಕೀಲರಿಂದ ಃ**

ನಂಜುಂಡಯ್ಯ ಬಿನ್ ದೊಡ್ಡಚೌಡಯ್ಯ ಈ ದಾವೆಯ 1ನೇ ಪ್ರತಿವಾದಿ ಅಂದರೆ ಸರಿ. ಸಾಕ್ಷಿಗೆ ಒಂದು ಆರ್ ಟಿ ಸಿ ಅನ್ನು ತೋರಿಸಿ ಅದರಲ್ಲಿ ನಂಜುಂಡಯ್ಯ ಬಿನ್ ದೊಡ್ಡಚೌಡಯ್ಯ ಇವರ ಹೆಸರಿನಲ್ಲಿ 20 ಗುಂಟೆ ಸ್ವತ್ತು ಇದೆ ಎಂದು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಆರ್ ಟಿ ಸಿ ಅನ್ನು **ನಿಡಿ 5 ಎಂದು ಗುರುತಿಸಲಾಯಿತು.** ನಿಡಿ 5ರ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿ. ನಮ್ಮ ತಂದೆ ಹೆಸರಿನಲ್ಲಿದ್ದ ಸ್ವತ್ತುಗಳನ್ನು ಮಾತ್ರ ಸೇರಿಸಿದ್ದೇವೆ. ದೊಡ್ಡಚೌಡಯ್ಯ ಇವರ ಇಬ್ಬರು ಹೆಂಡತಿಯ ಮಕ್ಕಳ ಮದ್ಯೆ ಆದ ವಿಭಾಗದಲ್ಲಿ ನಿಡಿ 5ರಲ್ಲಿರುವ ಸ್ವತ್ತು ಹಿರಿಯ ಹೆಂಡತಿ ಮಕ್ಕಳ ಭಾಗಕ್ಕೆ ಹೋಗಿತ್ತು ಅಂದರೆ ಗೊತ್ತಿಲ್ಲ. ಅವರ ಪರವಾಗಿ ಹೋಗಿದ್ದರಿಂದಲೇ ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿಯಲ್ಲ. ನಿಡಿ 5 ಯಾರ ಹೆಸರಿನಲ್ಲಿದೆ ಎಂದು ಈ ಹಿಂದೆ ನಾನು ಪರಿಶೀಲಿಸಿಲ್ಲ. ದಾವಾ ಸ್ವತ್ತು ನಮ್ಮ ಕುಟುಂಬದ ಸ್ವತ್ತು ಅಂದರೆ ಸರಿ. 1ನೇ ಪ್ರತಿವಾದಿ ನಮ್ಮ ಕುಟುಂಬದ ಸದಸ್ಯ ಇದ್ದರು ಅಂದರೆ ಸರಿ.

ಕಳ್ಳಿಪಾಳ್ಯ ಗ್ರಾಮದ ಒಂದು ಖಾನೇಶ್ವರಿ ಸ್ವತ್ತುಗಳು ನಂಜುಂಡಯ್ಯ ಇವರ ಹೆಸರಿನಲ್ಲಿದೆ ಅಂದರೆ ಸಾಕ್ಷಿ ಸರಿ ಎಂದು ಹೇಳುತ್ತಾರೆ. ಸದರಿ ದಾಖಲೆಗಳನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅವುಗಳನ್ನು **ನಿಡಿ 6 ಮತ್ತು 7 ಎಂದು ಗುರುತಿಸಲಾಯಿತು.** ಆ ಸ್ವತ್ತನ್ನು ನಾವು ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿ. ನಿಡಿ 1 ರಿಂದ 7 ರ ವರೆಗಿನ ಯಾವುದೇ ಸ್ವತ್ತುಗಳನ್ನು ನಾವು ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿ. ಅವುಗಳು ನಮ್ಮ ಕುಟುಂಬದ ಸ್ವತ್ತುಗಳು ಅಂದರೆ ನನಗೆ ಗೊತ್ತಿಲ್ಲ. ನಿಡಿ 1 ರಿಂದ 7 ಇವುಗಳು ನಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ಬರುತ್ತಿವೆ ಅಂದರೆ ಸರಿ. ನಾನು ಸಬ್ ರಿಜಿಸ್ಟರ್ ಕಚೇರಿಯಲ್ಲಿ ಹೆಬ್ಬೆಟ್ಟಿನ ಗುರುತು ಹಾಕಿದ್ದೇನೆ ಮತ್ತು ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ರಿಜಿಸ್ಟರ್ ನಂ. 1557 ಇದರಲ್ಲಿ ನಾನು ಸಹಿ ಮಾಡಿ ಹೆಬ್ಬೆಟ್ಟಿನ ಗುರುತು ಮಾಡಿದ್ದೇನೋ ಇಲ್ಲವೋ ಎಂದು ಪರಿಶೀಲಿಸಲು ತಜ್ಞರ ಬಳಿ ಕಳುಹಿಸಲು ನನ್ನ ಯಾವುದೇ ತಕರಾರು ಇಲ್ಲ.

ನನ್ನ ಬಳಿ 7-8 ವರ್ಷಗಳಿಂದ ರೇಷನ್ ಕಾರ್ಡ್ ಇದೆ. ಅದರಲ್ಲಿ ನನ್ನ ಹೆಂಡತಿ, ನನ್ನ ಮತ್ತು ನನ್ನ ಮಕ್ಕಳ ಹೆಸರು ಇದೆ. ನನ್ನ ತಮ್ಮ ಸುರೇಶ್ ಈತನ ರೇಷನ್ ಕಾರ್ಡ್ ಅಲ್ಲಿ ಅವರ ಹೆಂಡತಿ ಮ್ಕಕಳ ಹೆಸರು ಇದೆ ಅಂದರೆ ಸರಿ. 6 ನೇ ಪ್ರತಿವಾದಿ ರೇಷನ್ ಕಾರ್ಡ್ ಪ್ರತ್ಯೇಕವಾಗಿದೆ ಇದೆ ಅಂದರೆ ನನಗೆ ಗೊತ್ತಿಲ್ಲ. ನಾನು, ಪ್ರತಿವಾದಿ 1, 2, 6 ಮತ್ತು 7 ಇವರ ರೇಷನ್ ಕಾರ್ಡ್ ಗಳು ಪ್ರತ್ಯೇಕವಾಗಿರುತ್ತವೆ ಅಂದರೆ ಸರಿ. ಅದೇ ರೀತಿ ಮತದಾರರ ಪಟ್ಟಿ ಪ್ರತ್ಯೇಕವಾಗಿದೆ ಅಂದರೆ ಸರಿ. ದೊಡ್ಡಬಳ್ಳಾಪುರದಲ್ಲಿ ಸುಮಾರು 15 ವರ್ಷಗಳಿಂದ ಆ ರೀತಿ ಪ್ರತ್ಯೇಕವಾಗಿ ಮತದಾರರ ಪಟ್ಟಿಯಲ್ಲಿ ಪ್ರತ್ಯೇಕವಾಗಿ ಬರುತ್ತಿವೆ. ಅದೇ ರೀತಿ ಪ್ರತಿವಾದಿ 1, 2, 6 ಇವರುಗಳ ಹೆಸರಗಳು ಕಳ್ಳಿಪಾಳ್ಯದ ಮತದಾರರ ಪಟ್ಟಿಯಲ್ಲಿ ಪ್ರತ್ಯೇಕವಾಗಿ ಬರುತ್ತಿವೆ ಅಂದರೆ ಸರಿ. ನನ್ನ ಎಲ್ಲಾ ಅಣ್ಣ ತಮ್ಮಂದಿರು ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡು ಒಕ್ಕಣೆ ಮಾಡಿಕೊಂಡು ಇರುತ್ತಾರೆಂದರೆ ಸರಿ. ಸಮಾರು 15-16 ವರ್ಷಗಳಿಂದ ಆ ರೀತಿ ಮಾಡುತ್ತಾರೆ.

ನನ್ನ ಎಲ್ಲಾ ಅಣ್ಣ ತಮ್ಮಂದಿರು ನಮ್ಮ ಕುಟುಂಬದ ಹಣಕಾಸು ವ್ಯವಹಾರಗಳನ್ನು ಸುಮಾರು 25-30 ವರ್ಷಗಳಿಂದ ಪ್ರತ್ಯೇಕವಾಗಿ ಮಾಡಿಕೊಂಡು ಬರುತ್ತಿದ್ದೇವೆ. 6 ನೇ ಪ್ರತಿವಾದಿಯ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿಲ್ಲ. ನಮ್ಮ ತಂದೆ ಇರುವಾಗಲೇ ದಿಃ24.03.1977 ರಲ್ಲಿ ದೊಡ್ಡ ಹೆಂಡತಿಯ ಮಕ್ಕಳು ಮತ್ತ ಚಿಕ್ಕ ಹೆಂಡತಿಯ ಮಕ್ಕಳ ಪರವಾಗಿ ನಮ್ಮ ತಂದೆ ಪಂಚಾಯತ್ ಪಾರಿಕತ್ ಮಾಡಿಕೊಂಡಿದ್ದಾರೆಂದರೆ ಇರಬಹುದು ನನಗೆ ಗೊತ್ತಿಲ್ಲ. ಆ ಪಾರಿಕತ್ ನ ಮೂಲ ಪ್ರತಿ 1 ನೇ ಪ್ರತಿವಾದಿ ಬಳಿ ಇದೆ ಅಂದರೆ ನನಗೆ ಗೊತ್ತಿಲ್ಲ. ಅದರ ಜೆರಾಕ್ಸ್ ಪ್ರತಿಯನ್ನು ನಮ್ಮ ತಂದೆ ಇಟ್ಟುಕೊಂಡಿದ್ದರು ಮತ್ತು ಅದನ್ನು 6 ನೇ ಪ್ರತಿವಾದಿಗೆ ಕೊಟ್ಟಿದ್ದರು ಅಂದರೆ ನನಗೆ ಗೊತ್ತಿಲ್ಲ. ಆ ಪಾರಿಕತ್ ಬಗ್ಗೆ ನಮ್ಮ ಅಣ್ಣ ತಮ್ಮಂದಿರು ಸಹಿ ಮಾಡಿದ್ದಾರಂದರೆ ಗೊತ್ತಿಲ್ಲ. ಅದರಲ್ಲಿ ಸಾಕ್ಷಿದಾರರಾಗಿ ಲೆಂಕಪ್ಪ, ಅಂದಾನಯ್ಯ, ಸಿ ನಂಜಂಡಪ್ಪ, ಜೆ ಸಿದ್ದಪ್ಪ ಹೋಬಳಾಪುರ ಮತ್ತು ರಂಗಯ್ಯ ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆಂದರೆ ಗೊತ್ತಿಲ್ಲ. ಗಂಗರಾಮಯ್ಯ ಆ ಪತ್ರವನ್ನು ಬರೆದಿದ್ದಾರೆಂದರೆ ಗೊತ್ತಿಲ್ಲ. ಪತ್ರ ಆಗಿರುವ ವಿಚಾರ ನನಗೆ ಗೊತ್ತಿಲ್ಲ.

1977 ರಲ್ಲಿ ಆದ ವಿಭಾಗ ಪತ್ರದ ಪ್ರಕಾರ ದೊಡ್ಡ ಹಂಡತಿಯ ಮಕ್ಕಳು ಮತ್ತು ಚಿಕ್ಕ ಹೆಂಡತಿಯ ಮಕ್ಕಳು ಆಸ್ತಿಗಳನ್ನು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆಂದರೆ ಗೊತ್ತಿಲ್ಲ. ಆದರೆ ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡು ಇರುತ್ತಾರೆ. ದಿಃ20.04.1980 ರಂದು 1 ನೇ ಪ್ರತಿವಾದಿಯು ಐಟಂ ನಂ.1 ರಲ್ಲಿನ 29 ಗುಂಟೆ ಸ್ವತ್ತನ್ನು ನಮ್ಮ ತಾಯಿಗೆ ನೋಂದಾಯಿತ ಕ್ರಯಪತ್ರ ನಿಪಿ 30 ರಂತೆ ಮಾಡಿಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. ನಿಪಿ 30 ನ್ನು

ನಾನೇ ಕೊಟ್ಟಿದ್ದೇನೆ. ಅದರಲ್ಲಿ ಬರೆದ ವಿಷಯಗಳು ಕೇಸು ಹಾಕಿದ ನಂತರ ಗೊತ್ತಾಗಿದೆ. ಅದನ್ನು ನಾನು ಕೇಸು ಹಾಕುವ ಮೊದಲೆ ತೆಗೆದುಕೊಂಡಿದ್ದೇನೆಂದರೆ ಸರಿ. ದಾವಾ ಹಾಕುವ ಮೊದಲು ವಿಭಾಗ ಆಗಿದ್ದು ಗೊತ್ತಾಯಿತು. ಸುಮಾರು ವರ್ಷಗಳಿಂದ ನಮ್ಮ ತಂದೆಯ ದೊಡ್ಡ ಹೆಂಡತಿ ಮತ್ತು ಚಿಕ್ಕ ಹೆಂಡತಿ ಆಸ್ತಿಯನ್ನು ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿ ಪ್ರತ್ಯೇಕವಾಗಿ ಹಣಕಾಸಿನ ವ್ಯವಹಾರ ಮಾಡಿಕೊಳ್ಳುತ್ತಿರುವ ವಿಷಯ ನನಗೆ ಗೊತ್ತಿದ್ದರೂ ಸಹ ಒಂದು ಸುಳ್ಳು ದಾವೆ ಮಾಡಿದ್ದೇನೆಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**